ಶಾಸನದ ೨೩ನೇ ಕಲಮಿಗೆ ಹೆಚ್ಚಿನ ಅವಕಾಶ ಕಲ್ಪಿಸುವಂತೆ ದಿನಾಂಕ ೬-೧೦-೧೯೮೪ ರಂದು ಹೊರಡಿಸಲಾದ ಆರ್.ಡಿ.ಸಿ.ಳಿ.ಸಿ.ಎಲ್.ಎಂ. ೮೪ (೧೧)ನೇ ಅಧಿಸೂಚನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದೆ ಕಾಗದ ಪತ್ರಗಳನ್ನು ಮಂಡಿಸಲಾಗಿದೆ. ಈಗ ಮಾನ್ಯ ಬಣಕಾರ್ ಅವರು ವರದಿಯನ್ನು ಒಪ್ಪಿಸುವುದು.

ವರದಿಗಳ ಮಂಡನೆ

ಶ್ರೀ ಬಿ. ಜಿ. ಬಣಕಾರ್.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೆಲವು ಕಾರ್ಯ ವಿಧಾನಗಳ ಬಗ್ಗೆ ಹಾಗೂ ೧೯೭೨-೭೩ ರಿಂದ ೧೯೭೭-೭೮ನೇ ಸಾಲಿನ ವರೆಗಿನ ನಿಯಂತ್ರಕ ಮಹಾ ಲೇಖಾ ಪರೀಕ್ಷರ ವರದಿಯಲ್ಲಿ ಒಳಗೊಂಡಿರುವ ಪರಿಚ್ಛೇದಗಳ ಬಗ್ಗೆ ಸಾರ್ವಜನಿಕ ಉದ್ದಿಮೆಗಳ ಸಮಿತಿಯ ೧೮ನೇ ವರದಿಯನ್ನು ಈ ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಸಭೆಯ ಮುಂದೆ ಮಂಡಿಸಲಾಗಿದೆ.

ಮನವಿಗಳು

ಶ್ರೀ ಎಲ್. ಟಿ. ತಿಮ್ಮಪ್ಪಹೆಗಡೆ.—ನನ್ನ ಪ್ರಶ್ನೆ ಯಾವಾಗಲೂ ಕೊನೆಯಲ್ಲಿರುತ್ತದೆ. ಇದರಿಂದ ದಿನವೂ ನನ್ನ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತಿವೆ. ಇನ್ನು ಮುಂದೆ ನನ್ನ ಪ್ರಶ್ನೆ ಮೊದಲು ಬರಲು ಏನಾದರೂ ತಾವು ವ್ಯವಸ್ಥೆ ಮಾಡಬೇಕು. ತಾವು ನಮಗೆ ರಕ್ಷಣೆ ಕೊಡಬೇಕು.

ಅಧ್ಯಕ್ಷರು.—ಈ ಬಗ್ಗೆ ನಾನು ಸಹ ನಿಮ್ಮ ಜೊತೆಯಲ್ಲಿ ಸಹಭಾಗಿಯಾಗಿದ್ದೇನೆ. ಈ ಬಗ್ಗೆ ಏನು ಮಾಡಬೇಕೆಂಬುದನ್ನು ಈ ಸಭೆಯೇ ನಿರ್ಧಾರ ಮಾಡಬೇಕು.

ಶ್ರೀ ಪಂಪಾಪತಿ.—ಪ್ರಶ್ನೋತ್ತರ ಕಾಲವನ್ನು ಒಂದೂವರೆ ಗಂಟೆಗೆ ಹೆಚ್ಚು ಮಾಡುವುದು ಒಳ್ಳೆಯದು.

ಅಧ್ಯಕ್ಷರು.—ತಾವು ಸಲಹೆ ಮಾಡಿ. ಅದನ್ನು ಆಲೋಚನೆ ಮಾಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸಮಯ ವಿಸ್ತರಣೆ ಮಾಡುವುದು ಪ್ರತ್ಯೇಕ ಪ್ರಶ್ನೆ. ಆದರೆ ಇರುವ ಸಮಯದಲ್ಲಿ ಎಲ್ಲ ಪ್ರಶ್ನೆಗಳನ್ನೂ ಸಹ ತೆಗೆದುಕೊಳ್ಳಲು ತಾವು ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು.—ಈಗ ೧೫ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ತಾವು ಅ ಪ್ರಾ ಮು ಖ್ಯ ವಾ ದ ಪ್ರಶ್ನೆಗಳಿಗೆ ಕಡಿಮೆ ಪ್ರಾಮುಖ್ಯತೆ ಕೊಟ್ಟು ಪ್ರಾಮುಖ್ಯವಾದ ಹಾಗೂ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಪ್ರಶ್ನೆಗಳು ಬಂದಾಗ ಹೆಚ್ಚಿನ ಸದಸ್ಯರಿಗೆ ಉಪ ಪ್ರಶ್ನೆ ಕೇಳಲು ಅವಕಾಶ ಕೊಟ್ಟರೆ ಆಯಾ ದಿನದ ಎಲ್ಲ ಪ್ರಶ್ನೆಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ ಮತ್ತು ಈ ಸಮಸ್ಯೆಯನ್ನು ಸಹ ಬಗೆಹರಿಸಬಹುದು.

ಅಧ್ಯಕ್ಷರು.—ಇದನ್ನು ನಾನು ಈ ಸಭೆಯ ತೀರ್ಮಾನಕ್ಕೇ ಬಿಡುತ್ತೇನೆ. ಸಭಾನಾಯಕರು ಮತ್ತು ವಿರೋಧಪಕ್ಷದ ನಾಯಕರು ಸೇರಿಕೊಂಡು ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದು.

ಶ್ರೀ ಎಂ. ವೀರಪ್ಪಮೊಯ್ಲಿ.—ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದನ್ನು ನಾವು ನಿಮಗೇ ಬಿಡುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದಕ್ಕೆ ಎಲ್ಲರೂ ಸಹಾಯ ಮತ್ತು ಸಹಕಾರ ನೀಡಬೇಕಾಗುತ್ತದೆ.

ಅಧ್ಯಕ್ಷರು.—ಈಗ ಮಾನ್ಯ ವೀರಪ್ಪಮೊಯಿಲಿ ಅವರು ೩೩ನೇ ನಿಯಮದ ಪ್ರಕಾರ ಕೊಟ್ಟಿರುವ ನೋಟೀಸ್ ಬಗ್ಗೆ ಪ್ರಸ್ತಾಪ ಮಾಡಬಹುದು.